**<u>4ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು</u>**

<u>ಪಿ.ಸಿ.ಆರ್ ನಂ. 6871/2024</u> <u>ಸಿಡಬ್ಲ್ಯೂ -</u> 1

| | | |
|---|---|---|
| ಸಾಕ್ಷಿದಾರರ ಹೆಸರು | : | ಎಂ.ಕೆ.ರಂಗರಾಜು |
| ತಂದೆಯ ಹೆಸರು | : | ಕೃಷ್ಣಮಚಾರ್ |
| ವಯಸ್ಸು | : | 86 ವರ್ಷ |
| ವೃತ್ತಿ | : | ನಿವೃತ್ತ ನೌಕರರು |
| ವಾಸ | : | ಪಾಂಡವಪುರ, ಮೈಸೂರು |

**<u>ಸಾಕ್ಷಿಯನ್ನು ದಿಃ 23.01.2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಿರ್ಯಾದುದಾರರ ಸ್ವ ಇಚ್ಛಾ ಹೇಳಿಕೆ</u>** :

1 ಮತ್ತು 2ನೇ ಆರೋಪಿತರು ಶ್ರೀ ಸೀನಿಯರ್ಸ್ ಹೋಂ ಎಂಬ ಸಂಸ್ಥೆಯನ್ನು ನಡೆಸುತ್ತಿರುತ್ತಾರೆ. ಆರೋಪಿಗಳು ಶರದಿಂದು ಹಿರಿಯರ ವಸತಿ ಸಮುಚ್ಛಯ ಎಂಬ ಹೆಸರಿನಲ್ಲಿ ಹಿರಿಯ ನಾಗರೀಕರಿಗೆ ರಿಯಾಯಿತಿ ದರದಲ್ಲಿ ಮನೆ ಮತ್ತು ಫ್ಲಾಟ್ ಗಳನ್ನು ನಂ.254, ರಂಗನಕೊಪ್ಪಲು, ಕೆರೆತೊಣ್ಣುರು ರಸ್ತೆ, ಪಾಂಡವಪುರ, ಮಂಡ್ಯ ಜಿಲ್ಲೆಯಲ್ಲಿ ನಿರ್ಮಾಣ ಮಾಡುವುದಾಗಿ ಪ್ರಚಾರ ಮಾಡಿದ್ದರು. ಈ ಸಂಬಂಧ ಭಿತ್ತಿಪತ್ರಗಳನ್ನು ಸಹ ಸದರಿ ಯೋಜನೆಯ ಸಂಬಂಧ ಹೊರಡಿಸಿದ್ದರು.

2016 ರಲ್ಲಿ ನಾನು ಸದರಿ ಯೋಜನೆ ಅಡಿ ನಾನು ಕ್ಲಸ್ಟರ್ ಕಾಟೇಜ್ ತೆಗೆದುಕೊಳ್ಳಲು ಉದ್ದೇಶಿಸಿ ಆರೋಪಿಗಳನ್ನು ಭೇಟಿ ಆಗಿರುತ್ತೇನೆ. ದಿನಾಂಕಃ24.03.2016 ರ ನೊಂದಾಯಿತ ಕ್ರಯ ಪತ್ರದ ಮುಖಾಂತರ ನಾನು ಮತ್ತು ನನ್ನ ಮಗಳು ಮಯೂರಿ ರಾಜು ರವರು ಆರೋಪಿಗಳಿಂದ ಸಿಸಿಸಿ3 ಕಾಟೇಜ್ ಅನ್ನು ಖರೀದಿ ಮಾಡಿರುತ್ತೇವೆ. ಈ ಸಂಬಂಧ ಕ್ರಯಪತ್ರದ ನಕಲನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

ಮುಂದುವರೆದ ಪ್ರಮಾಣೀಕೃತ ಹೇಳಿಕೆಯನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಗಿದೆ.)

**ಓ ಹೇ ಕೇ ಸ ಇ**

**4ನೇ ಅ ಮು ನ್ಯಾ ದಂ ನ್ಯಾ**